# ಬುರುಡೆಯಲ್ಲ ಈ ಸಾಹಸ!



ತಲೆ ಕೆಳಗಾಗಿ, ಕಾಲುಗಳನ್ನು ಮೇಲೆತ್ತಿ ನಿಲ್ಲಲು ಪ್ರಯತ್ನಿಸಿ ನೋಡಿ, ಊಹುಂ. ಸಾಮಾನ್ಯರಿಗೆ ಇದು ಖಂಡಿತವಾಗಿಯೂ ಸಾಧ್ಯವಾಗದ ಕೆಲಸ. ಎಲ್ಲೋ ಅಪರೂಪಕ್ಕೆ ಬೆರಳೆಣಿಕೆಯಷ್ಟು ಸಾಧಕರು ಗೋಡೆಗೆ ಒರಗಿಯೋ ಅಥವಾ ಕೈಗಳನ್ನು ಕೆಳಕ್ಕೆ ಊರಿಯೋ ತಲೆಕೆಳಗು ನಿಲ್ಲಬಲ್ಲರಷ್ಟೆ.

ಆದರೆ ಚೀನಾದ ಈ ಕುಂಗ್ ಫೂ ಪಟು ಲೀ ಝಿನ್ ತಲೆಕೆಳಗಾಗಿ ನಿಂತಿರುವ  ಪರಿಯನ್ನು ನೋಡಿ. 47 ವರ್ಷ ವಯಸ್ಸಿನ ಈ ಸ್ಟಂಟ್ ಮಾಸ್ಟರ್, ತನ್ನ ದೇಹದ ಪೂರ್ತಿ ತೂಕವನ್ನೆಲ್ಲಾ ಮೊಳೆಯ ರೀತಿಯ ಲೋಹದ ಸಾಧನವೊಂದರ ಮೇಲೆ ಬಿಟ್ಟು ತಲೆಕೆಳಗಾಗಿ ನಿಲ್ಲಬಲ್ಲ! ಬರೋಬ್ಬರಿ 66 ಕೆ.ಜಿ ತೂಕದ ತನ್ನ ಮೈ ಭಾರವನ್ನೆಲ್ಲಾ ಬುರುಡೆಯಿಂದ ಮೊಳೆಯೊಂದರ ಮೇಲೆ ಬ್ಯಾಲೆನ್ಸ್ ಮಾಡಿ, ಆಗುವ ಅಸಾಧ್ಯ ನೋವನ್ನು ಸಹಿಸಿಕೊಂಡು, ಸುಮಾರು 10 ಸೆಕೆಂಡ್‌ನಷ್ಟು ಕಾಲ ಈತ ನಿಲ್ಲಬಲ್ಲ!

ಕಳೆದ ಇಪ್ಪತ್ತು ವರ್ಷದಿಂದಲೂ ಈ ರೀತಿ  ಮೊಳೆ ಮೇಲೆ ಉಲ್ಟಾ ನಿಲ್ಲುವ ಸಾಹಸವನ್ನು ಈತ ಪ್ರಾಕ್ಟೀಸ್ ಮಾಡಿದ್ದಾನಂತೆ. ಹಳ್ಳಿ ಹೈದನಾದ ಲೀ ಝಿನ್‌ನ ಬುರುಡೆ ಮಾತ್ರ ಗಟ್ಟಿ ಅಲ್ಲ; ಮೊಂಡು ಬಾಣದ ತರಹದ ಲೋಹದ ಸಾಧನವೊಂದರ ಮೇಲೆ ಹೊಟ್ಟೆಯನ್ನೂರಿ ಕೈ ಕಾಲುಗಳನ್ನು ಕೆಳಗೆ ಊರದೇ ಗಾಳಿಯಲ್ಲಿ ತೇಲಿಸುತ್ತಾ (ಸ್ಟಾರ್ ಫಿಶ್‌ನ ರೀತಿ) ಕೂಡಾ ನಿಲ್ಲಬಲ್ಲ! ಅಪಾರ ನೋವನ್ನು ಸಹಿಸಿಕೊಂಡು ಹೀಗೆ ಮೊಳೆಯ ಮೇಲೆ ತಲೆಕೆಳಗಾಗಿ ನಿಲ್ಲುವ ಈ ವಿದ್ಯೆಯನ್ನು ಈತನಿಗೆ ಧಾರೆ ಎರೆದು ಕೊಟ್ಟ ಗುರು ಹೈ ಡೆಂಗ್. ಈ ಗುರುವಿಗೆ ತನ್ನ ಎರಡು ಕೈ ಬೆರಳುಗಳ ಮೇಲೆ ದೇಹದ ಭಾರವನ್ನೆಲ್ಲಾ ಬಿಟ್ಟು ತಿರುವುಮುರುವಾಗಿ ನಿಲ್ಲುವ ಕಲೆ ಗೊತ್ತಿದೆ!

ಅಂದ ಹಾಗೆ, ಇತ್ತೀಚೆಗೆ ಚೀನಾದ ನ್ಯಾನಿಂಗ್ ಎಂಬಲ್ಲಿ ಲೀ ಝಿನ್ ತನ್ನ ಸಾಹಸವನ್ನು ತೋರಿಸಿದಾಗ ತೂತಾದ ಆತ ಬುರುಡೆಯನ್ನೂ ಚಿತ್ರದಲ್ಲಿ ನೋಡಬಹುದು.

■ ವಿದ್ಯಾ ವಿ ಹಾಲಭಾವಿ



